ಒ ಎಸ್ 44/2019 ಪಿ.ಡಬ್ಲ್ಯೂ 1

ಇಂದು ದಿಃ 17.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನ್ನ ಮುತ್ತಾತನ ಹೆಸರು ಸಿದ್ದರಾಮ ನಾಯಕ. ನನ್ನ ಮುತ್ತಾತನಿಗೆ 4 ಜನ ಗಂಡಮ ಮಕ್ಕಳು ಮಾದನಾಯಕ, ಇಂತಿನಾಯಕಸಿದ್ದನಾಯಕ, ಬಸವನಾಯಕ ಮತ್ತು ನಾಗನಾಯಕ. ನನ್ನ ಮುತ್ತಾತನಿಗೆ ಸುಮಾರು 20 ಎಕರೆ ಆಸ್ತಿ ಪಿತ್ರಾರ್ಜಿತವಾಗಿ ಬಂತು, ಆದರೆ ಅವುಗಳ ಸರ್ವೆ ನಂಬರ್ ಗೊತ್ತಿಲ್ಲ. ದಾವೆಯಲ್ಲಿ ತೋರಿಸಿರುವ ಆಸ್ತಿಗಳು ಎಲ್ಲಾ ಪಿತ್ರಾರ್ಜಿತ ಆಸ್ತಿಗಳು. ದಾವಾ ಆಸ್ತಿಗಳು ಎಲ್ಲವೂ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಿದ್ದರಾಮ ನಾಯಕ ಕಾಲವಾದ ನಂತರ ಅವರ 4 ಜನ ಗಂಡು ಮಕ್ಕಳ ಹೆಸರಿನಲ್ಲಿ ಜಂಟಿ ಖಾತೆ ಆಯಿತು. ನಾನು ಹಾಜರುಪಡಿಸಿರುವ ನಿಪಿ 2 ರ ಆಸ್ತಿಯ ಖಾತೆಗಳು ಮಾದನಾಯಕ, ಸಿದ್ದನಾಯಕ, ಬಸವನಾಯಕ ಹಾಗೂ ನಾಗನಾಯಕನ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. ಆ 4 ಜನ ಮಕ್ಕಳು ಆಸ್ತಿಗಳನ್ನು ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡ ದಾಖಲೆ ಯಾವುದು ನನ್ನ ಬಳಿ ಇಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರವೇ 4 ಜನರ ಹೆಸರಿನಲ್ಲಿ ಜಂಟಿಯಾಗಿ ಇದೆ ಎಂದರೆ ಸರಿ. ಈ ದಾವೆಯಲ್ಲಿ ನಾನು ಅವರ 4 ಜನ ಗಂಡು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ದಾವೆಯಲ್ಲಿ ತೋರಿಸಿರುವ ಎಲ್ಲಾ ಆಸ್ತಿಗಳಿಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಸಿದ್ದನಾಯಕ ಮತ್ತು ನಿಂಗನಾಯಕನಿಗೆ ಯಾವ ವರ್ಷ ಮದುವೆಯಾಯಿತು ಎಂದು ನನಗೆ ಗೊತ್ತಿಲ್ಲ. ಸಿದ್ದನಾಯಕ ಮತ್ತು ನಿಂಗನಾಯಕನ ತಂದೆ ಅವರ ಜೊತೆ ಮದುವೆಯಾಗುವ ತನಕ ವಾಸ ಇದ್ದರು. ನನ್ನ ತಾಯಿಗೆ ಯಾವಾಗ ಮದುವೆಯಾಯಿತು ಎಂದು ಗೊತ್ತಿಲ್ಲ. ಈ ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ತಾಯಿಗೆ 72 ವರ್ಷ ಆಗಿತ್ತು, ಅವರ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಾಯಿಯನ್ನು ತಗಡೂರಿಗೆ ಮದುವೆ ಮಾಡಿಕೊಡಲಾಗಿತ್ತು. ನನ್ನ ತಂದೆ ತಗಡೂರಿನಲ್ಲಿ ಮೃತಪಡುವವರೆಗೂ ಜೀವಿಸುತ್ತಿದ್ದರು. ನನ್ನ ತಂದೆಯ ಮರಣ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ತಾಯಿಯ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ. ನನ್ನ ತಾಯಿಯ ತಾಯಿ ದೊಡ್ಡಮ್ಮ ಯಾವಾಗ ಮೃತರಾದರು ಎಂದು ಗೊತ್ತಿಲ್ಲ.ನನ್ನ ತಾಯಿಯ ತಾಯಿ ಮೃತಪಟ್ಟ ನಂತರ ರಂಗಮ್ಮನನ್ನು 2ನೇ ಮದುವೆಯಾದರು ಎಂದರೆ ಅನೈತಿಕ ಸಂಬಂಧದಲ್ಲಿ ಇದ್ದರು ಎನ್ನುತ್ತಾರೆ. ಅನೈತಿಕ ಸಂಬಂಧದಲ್ಲಿ ಇದ್ದರು ಎಂದು ನಾನಾಗಲೀ ನನ್ನ ತಾಯಿಯಾಗಲೀ ದೂರು ದಾಖಲಿಸಿಲ್ಲ. ರಂಗಮ್ಮನಿಗೆ ನನ್ನ ತಾತನ ಮೂಲಕ ಒಬ್ಬ ಮಗ ಮತ್ತು 3 ಹೆಣ್ಣು ಮಕ್ಕಳು ಜನಿಸಿದ್ದರು. ಆ ಪೈಕಿ ಮಗನ ಹೆಸರು ಮಹದೇವಯ್ಯ (1ನೇ ಪ್ರತಿವಾದಿ) ಪುಟ್ಟನಾಗಮ್ಮ, ಸುಬ್ಬಮ್ಮ ಮತ್ತು ಮಲ್ಲಿಗಮ್ಮ. ನನ್ನ ತಾತ ಮೃತಪಟ್ಟ ನಂತರ ಅವರ ಒಬ್ಬನೇ ಮಗನ ಹೆಸರಿನಲ್ಲಿ ಖಾತೆ ಆಯಿತು ಎಂದರೆ 1991ರಲ್ಲಿ ಆ ರೀತಿ ಖಾತೆ ಆಯಿತು ಎನ್ನುತ್ತಾರೆ. ಆ ಸಮಯದಲ್ಲಿ ನನ್ನ ತಾಯಿಗಾಗಲೀ ಅಥವಾ

ಒಡಹುಟ್ಟಿದವರಿಗಾಗಲೀ ಆಸ್ತಿಯಲ್ಲಿ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಹೆಸರಿಗೆ ಖಾತೆಯಾಗಿದ್ದನ್ನು ನನ್ನ ತಾಯಿ ಅಥವಾ ಇತರರು ಪ್ರಶ್ನಿಸಿದ ಬಗ್ಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಎಲ್ಲಾ ಆಸ್ತಿಯ ಸ್ವಾಧೀನದಲ್ಲಿ 1990-91 ರಿಂದ ಇದ್ದಾರೆ ಎಂದರೆ ಸರಿ. ಅವರ ಕಾಲಾ ನಂತರ ಅವರ ಮಕ್ಕಳು ಸ್ವಾಧೀನ ಇದ್ದಾರೆ ಎಂದರೆ ಸರಿ. 1990 ರಿಂದ 2019ರವರೆಗೆ ನಾನಾಗಲಿ ನನ್ನ ತಾಯಿಯಾಗಲೀ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ ಆದರೆ ಆಸ್ತಿಯಲ್ಲಿ ಪಾಲು ಕೊಡುತ್ತೇವೆ ಎಂದು ಸತತವಾಗಿ ಹೇಳುತ್ತಿದ್ದರು. ಆಸ್ತಿಯಲ್ಲಿ ವಿಭಾಗ ಕೊಡಿ ಎಂದು ಹಕ್ಕು ಚಲಾಯಿಸಿದ ಬಗ್ಗೆ ನಮ್ಮಲ್ಲಿ ಯಾವುದೇ ದಾಖಲೆ ಇಲ್ಲ.

ದಾವಾ ಆಸ್ತಿಯ 1 ರಿಂದ 8 ನೇ ಆಸ್ತಿಗಳಿಗೆ ಸಂಬಂಧಪಟ್ಟ ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಾನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಯಾವೆಲ್ಲಾ ಸರ್ವೆ ನಂಬರ್ ನಲ್ಲಿ ಭಾಗ ಕೊಡಬೇಕು ಎಂದು ಕೇಳಿದ್ದೀರಿ ಎಂದರೆ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಆ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಎಲ್ಲಾ ಆಸ್ತಿಯ ಸ್ವಾಧೀನದಲ್ಲಿ 1990-91 ರಿಂದ ಇದ್ದಾರೆ ಎಂದರೆ ಸರಿ. ಅವರ ಕಾಲಾ ನಂತರ ಅವರ ಮಕ್ಕಳಾದ ಪ್ರತಿವಾದಿ 1ಎ ಯಿಂದ 1ಸಿ ರವರು ಸ್ವಾಧೀನ ಇದ್ದಾರೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟಾಗ ನನ್ನ ತಾಯಿಗೂ ಸಹ ಆಸ್ತಿಯಲ್ಲಿ ಹಕ್ಕು ಇರದ ಕಾರಣ 1ನೇ ಪ್ರತಿವಾದಿ ಹೆಸರಿಗೆ ಆದ ಖಾತೆಯನ್ನು ಅವರೂ ಪ್ರಶ್ನಿಸಿಲ್ಲ ಎಂದರೆ ಯಾರನ್ನು ಕೇಳದೆ ಮಾಡಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ಎಂದರೆ ನನ್ನ ಪ್ರಕಾರ ತಾತನಿಂದ ಬಂದಿದ್ದು. ದಾವಾ ಆಸ್ತಿಗಳು ತಾತನಿಂದ ಬಂತು ಎಂದು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಮೂಲ ಆಧಾರವನ್ನು ಕೊಟ್ಟಿದ್ದೇನೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ಎಂ ಆರ್, ಆರ್ ಟಿ ಸಿ ಇತ್ಯಾದಿಗಳು ಮೂಲ ಆಧಾರ ದಾಖಲೆಗಳಾಗಿರುತ್ತವೆ. ದಾವಾ ಆಸ್ತಿಗಳು ಸಿದ್ದರಾಮನಾಯಕನಿಗೆ ಹೇಗೆ ಬಂತು ಎಂದು ತಿಳಿದುಕೊಳ್ಳದೇ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವೆಲ್ಲಾ ಆಸ್ತಿಗಳು ಸಿದ್ದನಾಯಕ ಇಂತಿನಾಯಕನಿಗೆ ಬಂತು ಎಂದು ಪರಿಶೀಲಿಸಿಲ್ಲ, ನಾನು ಮೂಲ ಆಧಾರವನ್ನು ಕೊಟ್ಟಿದ್ದೇನೆ. ಸರಿಯಾದ ಮಾಹಿತಿ ಇಲ್ಲದಿದ್ದರೂ ಸಹ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿಗೆ 4 ಜನ ಮಕ್ಕಳು , ರಾಜಮ್ಮ ಹಿರಿಯವರು. ಅವರಿಗೆ ಈಗ 65 ವರ್ಷ. ನನ್ನ ಹಿರಿಯ ಅಕ್ಕನನ್ನು ಸಾಕ್ಷಿಯಾಗಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದರೆ ನಿಜಾಂಶ ತಿಳಿಯಬಹುದು ಎಂದು ನಾನೇ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.